

ಮೇಲೆ ಬಂಡೆಗಲ್ಲಿನ ಭಾರವಿಟ್ಟುಕೊಂಡು ಅಂದ.

ಒಂದು ದೀರ್ಘ ನಿಟ್ಟುಸಿರು ಚೆಲ್ಲಿದಳು. 'ಕೊಳ್ಳಿಗಿ ತಾಳಿ ಬಿಗಿದಾಗನ ಸುಖಾ ಅಂಬೋದನ್ನ ಕಳಕೊಂಡ್ನಿ... ಹಣ ಐತಿ... ಆಸ್ತೀನೂ ಐತಿ... ಗಂಡ ಅವನದ ರೀತಿಲೇ ಪಿರುತಿ ಮಾಡತಾನ... ನಾನು ನನದ ರೀತಿಲೆ! ಅದಕ್ಯಾವ ರೂಪಿಲ್ಲ, ಶಬುದಿಲ್ಲ...!'

'ಅಂದರ?'

'ನಾನು ಅವನನ್ನು ಕೂಡುವಾಗಲೆಲ್ಲ ನೀನ ಬಂದು ಕೂಡಿದಂಗ ಅನಿಸತೈತಿ... ಅವನೊಳಗ ನಿನ್ನ ಕಾಣತ್ಯಾನ... ಮದ್ವಿ ಆದಾಗಿಂದಲೂನು... ಇದ್ ಸರೀನೋ ತಪ್ಪೋ ಗೊತ್ತಿಲ್ಲ... ಅದಕ್ಕ ನನಗ್ಯಾವ ಅಪರಾಧಿ ಭಾವನೇನೂ ಇಲ್ಲ... ನಾನು ಈಗಲೂ, ಮುಂದನೂ, ಸಾಯೋತನ ನಿನ್ನ ಪ್ರೀತಿಸತ್ಯಾನ... ಆದರ ನಿಂದು ಮನ್ಸು ಯಾನ ನನಗ ಗೊತ್ತಿಲ್ಲ..!'

ಬಸೂ ಕಿವಿಯೊಳಗೆ ಈ ನುಡಿಗಳು ಮತ್ತೆ ಮತ್ತೆ ಅನುರಣಿಸಿದವು. ಕಾದ ಸೀಸವನ್ನು ಕಿವಿಯೊಳಗೆ ಎರಕ ಹೊಯ್ದಂಗೆ. ಈ ನುಡಿಗಳು ಶಿಲಾ ಶಾಸನದಂತೆ ಎದೆಗಲ್ಲಿನ ಮೇಲೆ ಅಚ್ಚೊತ್ತಿ ಒಡಮೂಡಿದವು. ಕರ್ರನೆ ಕಿರುಚುವ ಜಾಲಿ ಮರದ ಕೀಟಗಳ ಶಬುದ ಕ್ಷಣ ಹೊತ್ತು ಸ್ಥಬ್ದಗೊಂಡು ನಿಂತಿತು. ಅಂಥ ಕಡುಬಿಸಿಲಲ್ಲೂ ಒಲವಿನ ತಂಗಾಳಿ ಭರ್ರನೆ ಬೀಸಿತು. 'ಆದರ, ನಿಂದು ಯಾನ ನನಗ ಗೊತ್ತಿಲ್ಲ!' ಎಂಬ ರೂಪಾಳ ಪ್ರಶ್ನೆಗೆ ಉತ್ತರವನ್ನು ಬಸೂ ಬಿಸಿಲ ಬೆಳಕಲ್ಲಿ ಶೋಧಿಸಹತ್ತಿದ.

●